ನಿಗದಿಪಡಿಸಲಾಗಿದೆ. ವೈನ್‌ಶಾಪ್‌ಗಳಲ್ಲಿ ಮದ್ಯವನ್ನು ಸೊಹರಾದ ಬಾಟಲ್‌ಗಳಲ್ಲಿ ಮಾತ್ರ ಮಾರಾಟ ಮಾಡಲು ಅವಕಾಶವಿದೆ. ಬಾರ್‌ಗಳಲ್ಲಿ ಊಟದ ಜೊತೆಗೆ ಮದ್ಯಸೇವನೆಗೂ ಕೂಡ ಅವಕಾಶವಿರುತ್ತದೆ. ವಿವಿಧ ಸನ್ನದುಗಳ ವ್ಯಾಪಾರದ ವೇಳೆಯನ್ನು ಅವುಗಳ ಅಗತ್ಯ ಮತ್ತು ವೈವಿಧ್ಯತೆಗೆ ತಕ್ಕಂತೆ ನಿಗದಿಪಡಿಸುವ ಅಧಿಕಾರವನ್ನು ಅಬಕಾರಿ ಆಯುಕ್ತರ ನಿಯಮ 4 ಕರ್ನಾಟಕ ಅಬಕಾರಿ ನಿಯಮ 98ರಲ್ಲಿ ಹೊಂದಿರುತ್ತಾರೆ. ಸನ್ಮಾನ್ಯ ಸದಸ್ಯರು ಕೊಟ್ಟಂಥ ಸಲಹೆ ಸೂಚನೆಗಳನ್ನು ಗಮನದಲ್ಲಿಟ್ಟುಕೊಂಡು ಮುಂದಿನ ದಿನಗಳಲ್ಲಿ ಈ ವೇಳಾಪಟ್ಟಿಯಲ್ಲಿ ಏನಾದರೂ ಬದಲಾವಣೆ ಮಾಡುವುದಿದ್ದರೆ ನಾವು ಗಮನಹರಿಸುತ್ತೇವೆ ಎನ್ನುವ ವಿಷಯವನ್ನು ತಮ್ಮ ಮೂಲಕ ಸದಸ್ಯರಿಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ :— ಮಾನ್ಯ ಉಪಾಧ್ಯಕ್ಷರೆ, ಚರ್ಚೆಗೆ ಅವಕಾಶವಿಲ್ಲವೆನ್ನುವುದು ನನಗೂ ಗೊತ್ತು. ನಾನು ಹೇಳಿದ್ದನ್ನೇ ಸಚಿವರು ಹೇಳುವುದಾದರೆ ವಿಷಯವನ್ನು ನಾನು ಏತಕ್ಕೆ ಎತ್ತಬೇಕು? ನಾನೇ ಹೇಳಿದ 9.00 ಗಂಟೆಯಿಂದ 9.00 ಗಂಟೆಯವರೆಗೆ ಕೊಟ್ಟಿದ್ದೀರಿ. ಅವಕಾಶವಿಲ್ಲವೆನ್ನುವುದು ಗೊತ್ತು, ನನಗೆ ನಿಯಮ ಗೊತ್ತಿದೆ. ಆದರೆ ಉತ್ತರವನ್ನಾದರೂ ಅವರು ಸಮರ್ಪಕವಾಗಿ ಕೊಡಬೇಕಲ್ಲವೇ? ಕುಡಿಯುವುದನ್ನೇ 9.00 ಗಂಟೆಗೆ ನಿಲ್ಲಿಸಿ ನಾವು ತಯಾರಿದ್ದೇವೆ, ಅಥವಾ ಇಲ್ಲವೆಂದರೆ 10.30 ಗಂಟೆಗೊ ಅಥವಾ 11.00 ಗಂಟೆಗೊ ಮುಚ್ಚುವುದಕ್ಕೆ ಒಂದು ಅವಕಾಶ ಕೊಡುತ್ತೇವೆಂದು ತಾವು ಹೇಳಬೇಕಾಗುತ್ತದೆ.

ಶ್ರೀ ಎಸ್. ಜಯವಂತ :— ಉಪಾಧ್ಯಕ್ಷರೆ, ನಾನು ಕೂಡ ಈಗಾಗಲೇ ಸದಸ್ಯರ ಸಲಹೆ ಸೂಚನೆಗಳನ್ನು ಗಮನದಲ್ಲಿಟ್ಟುಕೊಂಡು ಮುಂದಿನ ದಿವಸಗಳಲ್ಲಿ ಮಾರ್ಪಾಡು ಮಾಡುವ ಅವಕಾಶ ಸಿಕ್ಕಾಗ ಗಮನಹರಿಸುತ್ತೇನೆ ಎನ್ನುವ ವಿಚಾರವನ್ನು ಹೇಳಿದ್ದೇನೆ.

(ಈ) ಹೊನ್ನಾವರ ಪಟ್ಟಣ ಪಂಚಾಯಿತಿಯಿಂದ ಗೋಕರ್ಣಪತ್ತೆಗಾಳಿಮಠಕ್ಕೆ ಭೂಮಿ ನೀಡುವ ಬಗ್ಗೆ.

ಡಾ: ಎಂ.ಪಿ. ಕರ್ಕಿ (ಕುಮ್ಟ) :— ಸನ್ಮಾನ್ಯ ಉಪಾಧ್ಯಕ್ಷರೆ, ಹೊನ್ನಾವರ ಪಟ್ಟಣ ಪಂಚಾಯಿತಿಯ ಸುಮಾರು [illegible] ಹಿಂದೆ 35 ಗುಂಟೆ ಪ್ರದೇಶವನ್ನು ಕಂಪೋಸ್ಟ್ ತಯಾರಿಕೆ ಎಂದು ಗೋಕರ್ಣ ಪತ್ತೆಗಾಳಿಮಠ ದೇವಸ್ಥಾನದಿಂದ ಭೂಸ್ವಾಧೀನಪಡಿಸಿಕೊಂಡರು. ಈ ಕಂಪೋಸ್ಟ್ ಕಾರ್ಯಕ್ರಮದ ಕಾರಣವಾದ್ದರಿಂದ ಜನಸ್ಪಾನಕ್ಕೆ ತರಲಾಗಲಿಲ್ಲ. ಈಗ ಈ ಸ್ಥಳವನ್ನು ಹೊನ್ನಾವರ ಪಟ್ಟಣಪಂಚಾಯಿತಿ ಗೋಕರ್ಣ ಪತ್ತೆಗಾಳಿಮಠ ದೇವಸ್ಥಾನಕ್ಕೆ ಹಿಂತಿರುಗಿಸಬೇಕೆಂಬ ಅನುಚಿತ ಒತ್ತಡ ಸರ್ಕಾರದಿಂದ ಬರುತ್ತಿದೆ. ಭೂ ಸ್ವಾಧೀನಪಡಿಸಿಕೊಂಡಾಗ ಈ ಸ್ಥಳ ರೈತರಸ್ಥಳವಾಗಿತ್ತು. ದೇವಸ್ಥಾನದ ಒಡೆತನದಲ್ಲಿ ಮುಂದುವರಿದರೆ ಭೂ ಸುಧಾರಣೆ ಕಾನೂನಿನ ಅನ್ವಯ ಇದು ರೈತರಿಗೇ ಸೇರುತ್ತಿತ್ತು. ಹಾಗಾಗಿ ಪತ್ತೆಗಾಳಿಮಠದವರು ಇದನ್ನು ತಮಗೆ ಹಿಂತಿರುಗಿಸಬೇಕೆಂದು ಹೇಳುವುದು ನ್ಯಾಯಸಮ್ಮತವಲ್ಲ. ಮೇಲೆ ಹೇಳಿದ 35 ಗುಂಟೆ ಸ್ಥಳಬಿಟ್ಟು ಪಟ್ಟಣಪಂಚಾಯಿತಿಯ ವಶದಲ್ಲಿ ಒಂದು ಸೆ.ಮಿ. ಜಾಗಕೂಡ ಇಲ್ಲ. ಹೊನ್ನಾವರ ಪಟ್ಟಣಪಂಚಾಯಿತಿಯ ವ್ಯಾಪ್ತಿಯಲ್ಲಿ ಒಂದು ಗುಂಟೆ ರೆವಿನ್ಯೂ ಜಾಗವಿಲ್ಲ. ಆದುದರಿಂದ ಈ ಸ್ಥಳ ಹೊನ್ನಾವರ ಪಟ್ಟಣ ಪಂಚಾಯಿತಿಗೆ ಅವಶ್ಯಕವಿದೆ

ಎಂದು ಪಟ್ಟಣ ಪಂಚಾಯಿತಿ ತೀರ್ಮಾನ ಕೈಗೊಂಡಿದೆ, ಆ ತೀರ್ಮಾನವನ್ನು ಸರ್ಕಾರಕ್ಕೂ ಕೂಡ ಹೇಳಿದೆ. ಸರ್ಕಾರಸ್ವಾಯತ್ತ ಸಂಸ್ಥೆಗಳ ಹಿತರಾಪಾಡಬೇಕಾಗಿದ್ದು, ಅದಕ್ಕೆ ತದ್ವಿರುದ್ಧವಾಗಿ ಸರ್ಕಾರ ಜಿಲ್ಲಾ ಆಡಳಿತದ ಮೇಲೆ ಅನುಚಿತ ಒತ್ತಡತಂದು ಪಟ್ಟಣ ಪಂಚಾಯಿತಿಯಿಂದ ಪತ್ತೆಗಾಳಿಮಠಕ್ಕೆ ಜಮೀನು ಕೊಡಿಸಬೇಕೆಂದು ಹಟತೊಟ್ಟಿದೆ. ಇದನ್ನು ನಿಲ್ಲಿಸಿ ಈ ಜಾಗವನ್ನು ಪಟ್ಟಣ ಪಂಚಾಯಿತಿಗೆ ಕೊಡಬೇಕೆಂದು ನಾನು ಒತ್ತಾಯಿಸುತ್ತೇನೆ. ಈ ವಿಚಾರವನ್ನು ಈ ಶೂನ್ಯ ವೇಳೆಯಲ್ಲಿ ಇವತ್ತು ಕೇಳುವುದಕ್ಕೆ ನಿನ್ನೆ ನನಗೆ ಅಲ್ಲಿಯ ಪಟ್ಟಣ ಪಂಚಾಯಿತಿಯ ಅಧ್ಯಕ್ಷರಿಂದ ಕರೆ ಬಂದಿತ್ತು, ಅವರು, ಇನ್ನು ಕೂಡ ಜಿಲ್ಲಾ ಆಡಳಿತ ಒತ್ತಡ ಮಾಡುತ್ತಿದೆ ಎಂದು ತಿಳಿಸಿದ್ದಾರೆ. ಅದನ್ನು ಕೂಡಲೆ ನಿಲ್ಲಿಸಿ ಜಿಲ್ಲಾಡಳಿತಕ್ಕೆ ಇದರ ಬಗ್ಗೆ ಮುಂದವರೆಯಬಾರದೆಂದು ಸೂಚನೆಯನ್ನು ಕೊಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ಕೇಳುತ್ತಿದ್ದೇನೆ.

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ (ಪೌರಾಡಳಿತ ರಾಜ್ಯ ಸಚಿವರು) :— ಸರ್ವೆ ನಂ. 395ನ 35 ಗುಂಟೆ ಜಾಗವೇನಿದೆ ಅದನ್ನು 1957 ನಲ್ಲಿ ಪಟ್ಟಣ ಪಂಚಾಯಿತಿಯವರು ವಾಟರ್ ಸಪ್ಲೈ ಎಂಪ್ಲಾಯಿಸ್ ಕ್ವಾರ್ಟರ್ಸ್ ಕಟ್ಟುವ ಉದ್ದೇಶದಿಂದ ಸ್ವಾಧೀನಪಡಿಸಿಕೊಂಡರು. ಆದರೆ ದಿನಾಂಕ 1-7-1997 ರಲ್ಲಿ ಆ ಮಠದವರು ಆ ಜಾಗ ಮಠಕ್ಕೆ ಸೇರಬೇಕೆಂದು ಸರ್ಕಾರಕ್ಕೆ ಮನವಿ ಮಾಡಿಕೊಂಡಿದ್ದಾರೆ. ಈಗಾಗಲೇ 1957 ರಲ್ಲಿ ಆ ಜಾಗವನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ, ವಾಟರ್ ಸಪ್ಲೈ ಪರ್ಪಸ್‌ಗೋಸ್ಕರ ಉಪಯೋಗ ಮಾಡುತ್ತಿದ್ದೇವೆ. ಅದು ಪಟ್ಟಣ ಪಂಚಾಯಿತಿಯಿಂದ 3 ಕಿ.ಮೀ. ದೂರವಿದೆ, ನಾವು ಆ ಜಾಗವನ್ನು ಸ್ವಾಧೀನಪಡಿಸಿಕೊಂಡಿರುವುದನ್ನು ವಾಪಸ್ ತೆಗೆದುಕೊಳ್ಳುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಡಾ: ಎಂ.ಪಿ. ಕರ್ಕಿ :— ಅದು ಪಟ್ಟಣ ಪಂಚಾಯಿತಿಯ ವ್ಯಾಪ್ತಿಯಲ್ಲಿ ಇಲ್ಲದೇ ಹೋದರೆ ಅದು ಪಟ್ಟಣ ಪಂಚಾಯತಿ ಸ್ಥಳ ಹೇಗಾಗುತ್ತದೆ, ಅದು ಪಟ್ಟಣ ಪಂಚಾಯಿತಿಯ ವ್ಯಾಪ್ತಿಯಲ್ಲೆ ಇದೆ. ಪಟ್ಟಣಪಂಚಾಯಿತಿಯಿಂದ 3 ಕಿ.ಮೀ. ದೂರದಲ್ಲಿದೆ ಎಂದು ಹೇಳುತ್ತೀರಿ, ಹಾಗಿದ್ದರೆ ಅದು ಪಟ್ಟಣ ಪಂಚಾಯಿತಿಯ ಸ್ವತ್ತು ಆದಾಗುವುದೇ ಇಲ್ಲ. ಈ ಒಂದು ಒತ್ತಡವನ್ನು ತಕ್ಷಣ ನಿಲ್ಲಿಸಿ ಇದರ ಬಗ್ಗೆ ಹೆಚ್ಚಿನ ಕ್ರಮ ಕೈಗೊಳ್ಳಲು ಜಿಲ್ಲಾ ಆಡಳಿತಕ್ಕೆ ಸೂಚನೆ ಕೊಡಬೇಕೆಂದು ನಾನು ಕೇಳುಕೊಳ್ಳುತ್ತೇನೆ.

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ :— ಮಾನ್ಯ ಉಪಾಧ್ಯಕ್ಷರೆ, ಆ ಜಾಗ 1957ರಲ್ಲಿ ಸ್ವಾಧೀನಪಡಿಸಿಕೊಂಡಿರುವುದು, ಅದನ್ನು ವಾಪಸ್ ಮಾಡುವ ಪ್ರಶ್ನೆಯೇ ಬರುವುದಿಲ್ಲ. ಪ್ರಸ್ತುತ ಅಲ್ಲಿನ ಜಿಲ್ಲಾಧಿಕಾರಿಗಳಿಂದ ಒಂದು ವರದಿಯನ್ನು ತರಿಸಿ ಏನು ಮಾಡಬೇಕೋ ಅದರ ಬಗ್ಗೆ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಎಂ.ಪಿ. ಪ್ರಕಾಶ್ (ವಾರ್ತೆ ಮತ್ತು ಪ್ರಚಾರ ಸಚಿವರು) :— ಭೂ ಸ್ವಾಧೀನ ಕ್ರಮವಾಗಿ ತೆಗೆದುಕೊಂಡ ಮೇಲೆ ಮತ್ತು ಅದನ್ನು ವಾಪಸ್ ಕೊಡುವ ಪ್ರಶ್ನೆ ಉದ್ಭವವಾಗುವುದಿಲ್ಲ. ನೀವು ಹೇಳಿದಂತೆ ಒಂದು ವೇಳೆ ಅನುಚಿತವಾದ ಒತ್ತಡಗಳೇನಾದರೂ

ಇದ್ದರೆ, ಮಂತ್ರಿಗಳು, ಜಿಲ್ಲಾಧಿಕಾರಿಗಳಿಂದ ವರದಿಯನ್ನು ತರಿಸಿಕೊಂಡು ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದ್ದಾರೆ.

(ಉ) ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಿಂದ ಉಚ್ಚನ್ಯಾಯಾಲಯದ ಆದೇಶ ಉಲ್ಲಂಘನೆ.

+ ಶ್ರೀ ಯು.ಬಿ. ಬಣಕಾರ್ (ಹೀರೆಕೇರೂರು) :— ಮಾನ್ಯ ಉಪಾಧ್ಯಕ್ಷರೇ, ಸರ್ಕಾರದ ಆದೇಶಗಳನ್ನು ಅಧಿಕಾರಿಗಳು ಉಲ್ಲಂಘನೆ ಮಾಡುತ್ತಿರುವುದನ್ನು ನೋಡುತ್ತಿದ್ದೇವೆ. ಆದೇ ರೀತಿ ಉಚ್ಚ ನ್ಯಾಯಾಲಯದ ಆದೇಶವನ್ನು ಉಲ್ಲಂಘನೆ ಮಾಡಿ ಒಬ್ಬ ಐಎಎಸ್ ಅಧಿಕಾರಿಯು ಕೂಡ ಜೈಲಿಗೆ ಹೋಗಿದ್ದನ್ನು ನೋಡಿದ್ದೇವೆ. ಆದರೆ ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಕರ್ನಾಟಕ ಉಚ್ಚನ್ಯಾಯಲಯ ಏನೊಂದು ಆದೇಶವನ್ನು ನೀಡಿತ್ತು, ಅದರ ರೀತಿ ನಡೆದುಕೊಳ್ಳದೆ ದಿನನಿತ್ಯ ತಪ್ಪು ಮಾಡುತ್ತಿದ್ದಾರೆ ಈಗಲೂ ಕೂಡ ನ್ಯಾಯಾಲಯದ ಉಲ್ಲಂಘನೆ ಮಾಡುತ್ತಿರುವುದನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಮಾನ್ಯ ಉಚ್ಚನ್ಯಾಯಾಲಯದ ರಿಟ್ ಪಿಟಿಷನ್ ನಂ. 28 866 : 93, ದಿನಾಂಕ: 8-13-1997ರ ಆದೇಶದ ಪ್ರಕಾರ ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಿಗೆ ಗೋಮಾಳ ಜಮೀನನ್ನು ಯಾವತ್ತೂ ಕಡಿಮೆ ಮಾಡದಂತೆ ನೋಡಿಕೊಳ್ಳಲು ಹಾಗೂ ಸದರಿ ರಿಟ್ ಪಿಟಿಷನ್‌ನ ಆದೇಶದ ಪ್ರತಿಯನ್ನು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಕಳುಹಿಸಿ ಸದರಿ ಆದೇಶದ ಪ್ರಕಾರ ನಡೆದುಕೊಳ್ಳಲು ಆದೇಶಿಸಲಾಗಿದೆ. ಆದರೂ ಸಹ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಹಾಗೂ ಇತರೆ ಅಧಿಕಾರಿಗಳಿಗೆ ಆದೇಶದ ನಕಲು ಪ್ರತಿಯನ್ನು ಇದುವರೆವಿಗೂ ಕಳುಹಿಸಿರುವುದಿಲ್ಲ. ಹಾಗೂ ಮಾನ್ಯ ನ್ಯಾಯಾಲಯದ ಆದೇಶವನ್ನು ಮೀರಿ ಹಾವೇರಿ ಜಿಲ್ಲಾಧಿಕಾರಿಗಳು ಹಾಗೂ ಹಿರೆಕೇರೂರು ತಹಸಿಲ್ದಾರರು ಗೋಮಾಳ ಜಮೀನನ್ನು ಕಡಿಮೆ ಮಾಡಿರುತ್ತಾರೆ.. ಕಾರಣ ಹಾವೇರಿ ಜಿಲ್ಲಾಧಿಕಾರಿಗಳು ಹಾಗೂ ಹಿರೆಕೆರೂರು ತಹಸಿಲ್ದಾರ್‌ರವರ ಈ ಆದೇಶವನ್ನು ತಡೆಹಿಡಿಯಲು ಮತ್ತು ಮಾನ್ಯ ನ್ಯಾಯಾಲಯದ ಆದೇಶವನ್ನು ಅವರು ಮೀರಿ ನಡೆದಿದ್ದರಿಂದ ಅವರ ಮೇಲೆ ಕ್ರಮ ಕೈಗೊಳ್ಳಲು ನಾನು ವಿನಂತಿಸುತ್ತೇನೆ. I will read the relevant portion.

"Gomal lands and Gunduthopu is a gift to villagers. They have been tampered with successfully from time to time by the special orders of the Deputy Commissioners. The need of the people and the purpose for which the lands have been reserved, though relevant provisions are very much found in statute book, the authorities are empowered to enforce these provisions under the Land Revenue Act and Rules, have failed to take special care to preserve these lands for the purpose for which they have been specially assigned. The quality of rural life can only be maintained by preserving the Gokatte for